ಕಾವ್ಯಸಂಕ



ಆರಿಫ್ ರಾಜಾ

ಕವಯಿತ್ರಿ, ಅನುವಾದಕಿ
**ಇಲಾರಿಯ ಜುವಿನಾಟ್ಲೊ**
ದೇಶ: **ಇಟಲಿ**

# ‘ಕವಿತೆ ತನಗೆ ಬೇಕಾದಾಗ ಜನ್ಮ ತಾಳುತ್ತದೆ’

◆ **ನಿಮ್ಮ ಬಾಲ್ಯದ ಪರಿಸರ, ಕುಟುಂಬ ಮತ್ತು ಶೈಕ್ಷಣಿಕ ದಿನಗಳ ನೆನಪುಗಳನ್ನು ಹಂಚಿಕೊಳ್ಳಿ...**

ನಾನು ಬಾಲ್ಯದಲ್ಲಿ ತುಂಬಾ ಚೂಟಿ. ಕುತೂಹಲವಂತೂ ಜಾಸ್ತಿ. ಸಣ್ಣ ವಯಸ್ಸಿನಿಂದಲೇ ನನಗೆ ಮಾಂತ್ರಿಕ ಲೋಕವೆಂದರೆ ಅಚ್ಚುಮೆಚ್ಚು. ಅನುಭಾವಿಕ ಎಂದು ಕರೆಯಬಹುದಾದ ಎಲ್ಲಾ ವಿಷಯಗಳ ಮೇಲೂ ಆಕರ್ಷಣೆ. ಮನೆಯಲ್ಲಿ ನಾವು ಒಟ್ಟು ನಾಲ್ವರಿದ್ದೆವು. ನಾನು, ನನ್ನ ತಂದೆ- ತಾಯಿ ಮತ್ತು ಸೋದರಿ. ನಾವು ರೋಮ್ ನಗರದ ಹೊರವಲಯದಲ್ಲಿ ಬಹಳ ನೆಮ್ಮದಿಯ ವಾತಾವರಣದಲ್ಲಿ ಬೆಳೆದೆವು. ನಾನು ರೋಮಿನ ಕಲಾ ಪ್ರೌಢಶಾಲೆಗೆ ಸೇರಿಕೊಂಡೆ. ಇಂದು ನನ್ನ ಜೊತೆಗಿರುವ ಬಹುತೇಕ ಸ್ನೇಹಿತರು ನನಗೆ ಸಿಕ್ಕಿದ್ದು ಅಲ್ಲಿಯೇ. ನಂತರ ರೋಮ್ ನಗರದ ಪುರಾತನ ಐತಿಹಾಸಿಕ ವಿಶ್ವವಿದ್ಯಾಲಯದಲ್ಲಿ ಉನ್ನತ ವ್ಯಾಸಂಗ ಶುರು ಮಾಡಿದೆ.

